# ಮಾತು-ಕತೆ

ಎಂ.ಎ. ಮುಗಿದ ನಂತರ ವಿಮರ್ಶಕ ಡಿ.ಆರ್. ನಾಗರಾಜ ಅವರ ಮಾರ್ಗದರ್ಶನದಲ್ಲಿ ನಾನು ಪಿಎಚ್.ಡಿ. ಮಾಡಲು ನಿರ್ಧರಿಸಿದಾಗ 'ನವೋದಯ ಕಾವ್ಯದ ಮೇಲೆ ಪಾಶ್ಚಾತ್ಯ ವಿಮರ್ಶೆಯ ಪ್ರಭಾವ' ವಿಷಯವನ್ನು ಆಯ್ಕೆ ಮಾಡಿಕೊಂಡೆ. ಅದಕ್ಕೆ ಪೂರಕವಾಗಿ ನಾನು ಬರೆದ ಕೆಲವು ಲೇಖನಗಳನ್ನು ಡಿ.ಆರ್. ಅವರಿಗೆ ಗಮನಿಸಲು ಕೊಟ್ಟಿದ್ದೆ. ಅದನ್ನು ಓದಿದ ಅವರು 'ಕನ್ನಡದ ಭರವಸೆಯ ವಿಮರ್ಶಕಿ ನೀವಾಗಬಲ್ಲಿರಿ. ನಿಮ್ಮೊಳಗೆ ಅದ್ಭುತವಾದ ವಿಮರ್ಶೆ ಇದೆ' ಎಂಬಂತಹ ಪ್ರೇರಣೆಯ ಮಾತುಗಳನ್ನು ಆಡಿದ್ದರು. ಆಗಲೂ ನಾನು, 'ನನಗೆ ಕವಿಯಾಗುವ ಆಸೆ ಇದೆಯೇ ಹೊರತು ವಿಮರ್ಶಕಿಯಾಗುವ ಕನಸು ಇಲ್ಲ' ಎಂದೇ ನುಡಿದಿದ್ದೆ. ಆದರೆ ಡಿ.ಆರ್. ಅಲ್ಲಿಗೆ ಬಿಡದೇ, 'ಕಾವ್ಯ ಬಂದೀತು, ವಿಮರ್ಶೆ ಹದಗೊಳ್ಳುವುದು ಬರಿಯ ಚಿನ್ನಾಟದ ಕೆಲಸವಲ್ಲ' ಎಂಬ ಬೇಂದ್ರೆ ಸಾಲನ್ನು ಉದ್ಧರಿಸಿ, 'ಈ ಹೊತ್ತಲ್ಲಿ ವಿಮರ್ಶೆಯ ಅಗತ್ಯ ತುಂಬಾ ಇದೆ. ವಿಮರ್ಶಕಿಯರ ಅಗತ್ಯವಂತೂ ಇದ್ದೆ ಇದೆ' ಎಂದು ಮನವರಿಕೆ ಮಾಡಿದ್ದರು. ಪಿಎಚ್.ಡಿ. ಓದಿನ ಪ್ರಕ್ರಿಯೆಯಲ್ಲಿ ನನಗೆ ಕಾವ್ಯದ ಜೊತೆ ಹೇಗೋ ಹಾಗೆ ವಿಮರ್ಶೆಯ ಜತೆಗೂ ಕರುಳಿನ ಸಂಬಂಧ ಬೆಳೆಯಿತು. ಒಳ್ಳೆಯ ವಿಮರ್ಶೆ ಎನ್ನುವುದು ಒಳ್ಳೆಯ ಕಾವ್ಯದಷ್ಟೆ ಆಕರ್ಷಕವಾಗಿರುತ್ತೆ, ಪರಿಣಾಮಕಾರಿಯಾಗಿರತ್ತೆ, ಅದನ್ನು ಓದುವುದು ಕೂಡಾ ರಸಾನುಭವದ ಅನುಭವ ನೀಡುತ್ತೆ ಎನ್ನುವುದು ಕನ್ನಡದ, ಭಾರತದ ಮತ್ತು ಪಾಶ್ಚಾತ್ಯ ಪಠ್ಯಗಳನ್ನು ಓದುತ್ತಾ ವಿಮರ್ಶೆ ನನಗೆ ತಿಳಿಯುತ್ತಾ ಹೋಯಿತು. ವಿಮರ್ಶೆಯ ಜೊತೆಯಲ್ಲಿ ನನ್ನ ಸಂಬಂಧ ಬೆಳೆದ ಹಾಗೆ ಮುಂದೆ ಅದು ಸ್ತ್ರೀವಾದಿ ಸಂಕಥನಕ್ಕೆ ಸಹಜವಾಗಿಯೇ ಹೊರಳಿಕೊಂಡಿತು. ಸ್ತ್ರೀವಾದಿ ವಿಮರ್ಶೆಯನ್ನು ಒಟ್ಟು ವಿಮರ್ಶೆಯಿಂದ ಬೇರೆಯಾಗಿಸುವುದರಲ್ಲಿ ಮುಂಚೆಯಿಂದ ನನಗೆ ಯಾವ ಆಸಕ್ತಿಯೂ ಇಲ್ಲ. ಬಹಳ ಸ್ಪಷ್ಟವಾಗಿ ಹೇಳುತ್ತಿದ್ದೇನೆ, ಉದ್ದಕ್ಕೂ ನನ್ನ ಪ್ರಯತ್ನ ಇರುವುದೇ ವಿಮರ್ಶೆಯ ಒಳಗೆಯೇ ಒಂದು ಸ್ತ್ರೀ ಸಂವೇದನೆ ಬರಬೇಕು ಎನ್ನುವುದರೆಡೆಗೆ.



**◆ ಸ್ತ್ರೀವಾದಿ ವಿಮರ್ಶಕಿಯರು ಸಾಗಿ ಬಂದ ದಾರಿ ತುಂಬಾ ಪೆಡಸಾದದ್ದು; ಪ್ರಾರಂಭಿಕ ಘಟ್ಟದಲ್ಲಿ ಸಮಾಜದ ಅನುಭೂತಿ ಇರಲಿ, ವಿದ್ವತ್ ವಲಯದಲ್ಲೂ ಅವರಿಗೆ ತೀವ್ರವಾದ ಪ್ರತಿರೋಧವೇ ಎದುರಾಗಿದೆ. ನಿಮ್ಮ ಪ್ರಾರಂಭಿಕ ದಿನಗಳು ಹೇಗಿದ್ದವು?**

ಸ್ತ್ರೀವಾದದ ಕಡೆಗೆ ನನ್ನನ್ನು ಗಟ್ಟಿಯಾಗಿ ಎಳೆದದ್ದೇ ಅದಕ್ಕೆ ಹೆಜ್ಜೆ ಹೆಜ್ಜೆಗೂ ಎದುರಾದ ಪ್ರತಿರೋಧವೇ ಎನ್ನಬೇಕು. ಕನ್ನಡದ ಮಹತ್ವದ ಕೃತಿಗಳನ್ನು ಹೆಣ್ಣುನೋಟದಿಂದ ನೋಡಲು ಪ್ರಾರಂಭಿಸಿದ ಕೂಡಲೇ ನನ್ನ ಜೊತೆಯಲ್ಲಿದ್ದವರೇ ಅದನ್ನು ವಿರೋಧಿಸಿದ್ದರು. ಆಗ ನನಗನಿಸಿದ್ದು ಈ ವಿರೋಧದ ಮೂಲ ಎಲ್ಲಿದೆ? ವಿರೋಧದ ಮೂಲ,